# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1671 (1947) |
| ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀಮತಿ ಬಲ್ಕೀಸ್ ಬಾನು<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| ಉತ್ತರಿಸುವ ದಿನಾಂಕ | : | 24.03.2026 |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಂಖ್ಯೆ ಎಷ್ಟು;</td><td rowspan="2">ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಒಟ್ಟು 138 ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಕಾರ್ಯನಿರ್ವಹಿಸುತ್ತಿವೆ. ಸದರಿ ಜಿಲ್ಲೆಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸ್ವಾಮ್ಯದ ಹಾಗೂ ಖಾಸಗಿ ಕೈಗಾರಿಕೆಗಳ ವಿವರಗಳು ಈ ಕೆಳಕಂಡಂತಿವೆ:
<table>
<tr><th>ವಿವರಗಳು</th><th>ಶಿವಮೊಗ್ಗ</th><th>ದಕ್ಷಿಣ ಕನ್ನಡ</th><th>ಉಡುಪಿ</th><th>ಚಿಕ್ಕ ಮಗಳೂರು</th><th>ಒಟ್ಟು</th></tr>
<tr><td>ಕೇಂದ್ರ ಸರ್ಕಾರದ ಸ್ವಾಮ್ಯದ ಕೈಗಾರಿಕೆಗಳು</td><td>01</td><td>06</td><td>01</td><td>0</td><td>08</td></tr>
<tr><td>ರಾಜ್ಯ ಸರ್ಕಾರದ ಸ್ವಾಮ್ಯದ ಕೈಗಾರಿಕೆಗಳು</td><td>01</td><td>0</td><td>0</td><td>0</td><td>01</td></tr>
<tr><td>ಖಾಸಗಿ ಕೈಗಾರಿಕೆಗಳು</td><td>18</td><td>50</td><td>55</td><td>06</td><td>129</td></tr>
<tr><td>ಒಟ್ಟು</td><td>20</td><td>56</td><td>56</td><td>06</td><td>138</td></tr>
</table></td></tr>
<tr><td>ಆ</td><td>ಇದರಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸ್ವಾಮ್ಯದ ಕೈಗಾರಿಕೆಗಳು ಹಾಗೂ ಖಾಸಗಿ ಕೈಗಾರಿಕೆಗಳ ಸಂಖ್ಯೆ ಎಷ್ಟು;</td></tr>
<tr><td>ಇ</td><td>ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳು ಹಾಗೂ ಖಾಸಗಿ ಕೈಗಾರಿಕೆಗಳಲ್ಲಿ ನೇಮಕಾತಿ ಸಂದರ್ಭದಲ್ಲಿ ಅನುಸರಿಸುವ ಮಾನದಂಡಗಳೇನು;</td><td>ಕೇಂದ್ರ/ರಾಜ್ಯ ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳಲ್ಲಿ ಆಯಾ ಸರ್ಕಾರದ ಮಾನದಂಡಗಳು, ವೃಂದಗಳ ಮತ್ತು ನೇಮಕಾತಿಗಳ ಪ್ರಕಾರ ನೇಮಕಾತಿಯನ್ನು ಅನುಸರಿಸುತ್ತವೆ.<br>ಸಾಮಾನ್ಯವಾಗಿ ಖಾಸಗಿ ಕೈಗಾರಿಕೆಗಳಲ್ಲಿ ನೇಮಕಾತಿ ಸಂದರ್ಭದಲ್ಲಿ ಆಯಾ ಕೆಲಸಗಳಿಗೆ ತಕ್ಕಂತೆ ತಾಂತ್ರಿಕ ಕೌಶಲ್ಯ, ಸಾಮರ್ಥ್ಯ, ಅನುಭವ, ವಿದ್ಯಾಭ್ಯಾಸ ಇವುಗಳು ಪ್ರಮುಖ ಮಾನದಂಡಗಳಾಗಿರುತ್ತವೆ ಹಾಗೂ ಮೌಲ್ಯ ಮಾಪನ ಮತ್ತು ಸಂದರ್ಶನಗಳ ಮೂಲಕ ನೇಮಕಾತಿ ಮಾಡಲಾಗುತ್ತದೆ.</td></tr>
</table>

<table>
<tr>
<td>ಈ</td>
<td>ಸ್ಥಳೀಯ ನಿರುದ್ಯೋಗಿ ಪದವೀಧರರು ಸೇರಿದಂತೆ ಸ್ಥಳೀಯರಿಗೆ ನೇಮಕಾತಿ ಸಂದರ್ಭದಲ್ಲಿ ಉದ್ಯೋಗ ಕಲ್ಪಿಸಲು ಆದ್ಯತೆ ನೀಡಲಾಗುತ್ತಿದೆಯೇ; ಎಷ್ಟು ಮಂದಿಗೆ ಉದ್ಯೋಗ ನೀಡಲಾಗಿದೆ?</td>
<td>ಕೈಗಾರಿಕಾ ನೀತಿಯನ್ವಯ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ನೀಡುವ ಸಂದರ್ಭದಲ್ಲಿ ಕನ್ನಡಿಗರಿಗೆ ಒಟ್ಟಾರೆಯಾಗಿ ಕನಿಷ್ಟ 70 ರಷ್ಟು ಹಾಗೂ ಗ್ರೂಪ್-ಡಿ ವರ್ಗದಲ್ಲಿ ಶೇ.100 ರಷ್ಟು ಉದ್ಯೋಗ ನೀಡಿದ್ದಲ್ಲಿ, ಪರಿಶೀಲಿಸಿ ರಿಯಾಯಿತಿ ಹಾಗೂ ಪ್ರೋತ್ಸಾಹಕಗಳನ್ನು ನೀಡಲಾಗುತ್ತದೆ.<br><br>ಅದರಂತೆ, ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಶೇ. 70ಕ್ಕಿಂತ ಹೆಚ್ಚು ಸ್ಥಳೀಯರಿಗೆ ಆದ್ಯತೆ ನೀಡಲಾಗುತ್ತಿದೆ ಹಾಗೂ ಶೇ.100 ರಷ್ಟು ಗ್ರೂಪ್-ಸಿ ಮತ್ತು ಗ್ರೂಪ್-ಡಿ ವರ್ಗದವರಿಗೆ ಉದ್ಯೋಗ ನೀಡಲಾಗಿದೆ.<br><br>ಸದರಿ ನಾಲ್ಕು ಜಿಲ್ಲೆಗಳ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡಿರುವ ವಿವರಗಳು
<table>
<tr><th>ವಿವರಗಳು</th><th>ಶಿವಮೊಗ್ಗ</th><th>ದಕ್ಷಿಣ ಕನ್ನಡ</th><th>ಉಡುಪಿ</th><th>ಚಿಕ್ಕಮಗಳೂರು</th></tr>
<tr><td>ಒಟ್ಟು ಉದ್ಯೋಗಿಗಳ ಸಂಖ್ಯೆ</td><td>8846</td><td>13308</td><td>15414</td><td>1050</td></tr>
<tr><td>ಸ್ಥಳೀಯ ಉದ್ಯೋಗಿಗಳ ಸಂಖ್ಯೆ</td><td>8780</td><td>11786</td><td>14900</td><td>1011</td></tr>
<tr><td>ಶೇಕಡಾವಾರು</td><td>99.25%</td><td>88.56%</td><td>96.66%</td><td>96.28%</td></tr>
</table>
</td>
</tr>
</table>

**ಸಿಐ 71 ಎಸ್‌ಪಿಐ 2026**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು